ಹೊರ ರಾಜ್ಯಗಳಿಂದ ಪಡೆಯಲಾದ ಆಹಾರ ಧಾನ್ಯಗಳು

೮೬೮ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ೧೯೮೨-೮೩, ೧೯೮೩-೮೪, ೧೯೮೪-೮೫ ಹಾಗೂ ೧೯೮೫-೮೬ನೇ ಸಾಲುಗಳಲ್ಲಿ ಎಲ್ಲಾ ರೀತಿಯ ಧಾನ್ಯಗಳ ಒಟ್ಟಾರೆ ಉತ್ಪಾದನೆ ಎಷ್ಟು

ಆ) ಬೇರೆ ರಾಜ್ಯದಿಂದ ಕರ್ನಾಟಕಕ್ಕೆ ಬಂದಿರುವ ಧಾನ್ಯದ ಒಟ್ಟಾರೆ ಪ್ರಮಾಣ ಎಷ್ಟು.

ಇ) ನಮ್ಮ ರಾಜ್ಯದಿಂದ ಬೇರೆ ರಾಜ್ಯಗಳಿಗೆ ಸಾಗಾಣಿಕೆ ಮಾಡಿರುವ ಧಾನ್ಯದ ಒಟ್ಟಾರೆ ಮೊತ್ತವೆಷ್ಟು.

ಈ) ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಕೊಟ್ಟಿರುವ ಧಾನ್ಯದ ಮೊತ್ತವೆಷ್ಟು? (ಪ್ರತ್ಯೇಕವಾಗಿ)

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧೯೮೨-೮೩—೬೦.೨೯ ಲಕ್ಷ ಟನ್ನುಗಳು

೧೯೮೩-೮೪—೭೩.೧೩ ಲಕ್ಷ ಟನ್ನುಗಳು

೧೯೮೪-೮೫—೬೪.೬೯ ಲಕ್ಷ ಟನ್ನುಗಳು

೧೯೮೫-೮೬ರ ಮಾಹಿತಿಯು ಸಧ್ಯದಲ್ಲಿ ದೊರಕಂವುದಿಲ್ಲ.

ಆ) ಆಹಾರ ಇಲಾಖೆಯಲ್ಲಿ ಈ ವಿವರಗಳು ದೊರೆಯುವುದಿಲ್ಲ.

ಇ) ಜಿಲ್ಲಾಧಿಕಾರಿಗಳು ನೀಡಿರುವ ರಹದಾರಿ ಪತ್ರದ ಮೇಲೆ ೧೯೮೪-೮೫ನೇ ಸಾಲಿನಲ್ಲಿ ೫೮೪೫೫ ಮೆ.ಟನ್ ಮತ್ತು ೧೯೮೫-೮೬ನೇ ಸಾಲಿನಲ್ಲಿ ೧೫೫೪೫೨ ಮೆ. ಟನ್ ಲೆವಿ ಮುಕ್ತ ಅಕ್ಕಿಯು ಹೊರ ರಾಜ್ಯಗಳಿಗೆ ಸಾಗಾಣಿಕೆಯಾಗಿರುವುದು.

ಈ) ಸಾರ್ವಜನಿಕ ವಿತರಣೆಗಾಗಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಪ್ರತಿ ತಿಂಗಳು ೪೫ ಸಾವಿರ ಮೆ.ಟನ್ ಅಕ್ಕಿ ಮತ್ತು ೨೫ ಸಾವಿರ ಮೆ.ಟನ್ ಗೋಧಿಯನ್ನು ಕೊಡುತ್ತಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ೧೯೮೫-೮೬ನೇ ಸಾಲಿನಲ್ಲಿ ಎಷ್ಟು ಶೇಖರಣೆಯಾಗಿದೆ ಹಾಗೂ ಎಷ್ಟು ಧಾನ್ಯ ಉತ್ಪಾದನೆ ಮಾಡಲಾಗಿದೆ ಎನ್ನುವ ಬಗ್ಗೆ ವಿವರಣೆಯನ್ನು ಕೊಟ್ಟಿರುವುದಿಲ್ಲ. ಇವತ್ತು ಕೇಂದ್ರ ಸರ್ಕಾರದಿಂದ ಬರತಕ್ಕ ತಿಂಗಳ ಕೋಟಾ ಏನು ಹಾಗೂ ಸರ್ಕಾರ ಕೊಡತಕ್ಕ ಕೋಟಾ ಏನು ಹಾಗೂ ಇದರ ಡಿಫರೆನ್ಸ್ ಎಷ್ಟು ಆಗುತ್ತದೆ ಎಂಬುದನ್ನು ತಿಳಿಸಬೇಕು. ಇದು ಸರ್‌ಪ್ಲಸ್ ಆಗುತ್ತದೆಯೇ ಅಥವಾ ಕಡಿಮೆ ಆಗುತ್ತದೆಯೇ ಎಂಬುದನ್ನು ಸಹ ತಿಳಿಸಬೇಕು.

ಶ್ರೀ ಜಿ. ಬಸವಣ್ಣಪ್ಪ.—ಅಧ್ಯಕ್ಷರೇ, ಸಾರ್ವಜನಿಕ ವಿತರಣೆಗೆ ಬೇಕಾಗತಕ್ಕ ೪೫ ಸಾವಿರ ಟನ್ ಅಕ್ಕಿ ಪೈಕಿ ಏನು ೧೦೦೦ ದಿಂದ ೧೫೫೦ ಸಾವಿರ ಟನ್ ಖೋತಾ ಬೀಳುತ್ತದೆ ಅದನ್ನು ರಾಜ್ಯ ಸರ್ಕಾರ ತನ್ನ ಬಫರ್ ಸ್ಟಾಕ್‌ನಿಂದ ಒದಗಿಸಿ ವಿತರಣೆ ಮಾಡುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಪ್ರತಿ ತಿಂಗಳು ಬೇಕಾಗತಕ್ಕ ೫೦-೬೦ ಸಾವಿರ ಟನ್ ಅಕ್ಕಿ ಜೊತೆಗೆ ವಿತರಣೆ ಮಾಡತಕ್ಕ ಜೋಳ ಮತ್ತು ಇನ್ನಿತರ ಧಾನ್ಯಗಳ ಬಗ್ಗೆ ಉತ್ತರ ಕರ್ನಾಟಕ ಭಾಗದಲ್ಲಿ ಯಾವ ನಿರ್ದಿಷ್ಟ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ? ನಮ್ಮ ಕಡೆ ಇವುಗಳನ್ನು ಯಾವ ದರದಲ್ಲಿ ತಾವು ಶೇಖರಣೆ ಮಾಡುತ್ತೀರಿ? ಇವುಗಳನ್ನು ತಾವು ಹೊರ ಪೇಟೆಯಿಂದ ತೆಗೆದುಕೊಳ್ಳುತ್ತಿದ್ದೀರಾ?

ಶ್ರೀ ಜಿ. ಬಸವಣ್ಣಪ್ಪ.—ಬಳಕೆದಾರರ ಅವಶ್ಯಕತೆಗನುಗುಣವಾಗಿ ನಾವು ಈ ಸಾರ್ವಜನಿಕ ವಿತರಣಾ ಪದ್ಧತಿಯನ್ನು ನಮ್ಮ ಜನತಾ ಸರ್ಕಾರ ಬಂದಮೇಲೆ ಬಲಗೊಳಿಸಿದ್ದೇವೆ. ಮೊದಲು ೨೫ ಸಾವಿರ ಟನ್ ಆಹಾರಧಾನ್ಯವನ್ನು ಕೊಡುತ್ತಿದ್ದೆವು ಆದರೆ ಈಗ ೬೦ ಸಾವಿರ ಟನ್ ಹೆಚ್ಚುತ್ತಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೂಲಿಗಾರರು, ಕೃಷಿ ಕಾರ್ಮಿಕರು ಜೋಳವನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗಿಸುತ್ತಾರೆ. ಮತ್ತು ಹಳೇ ಮೈಸೂರು ಭಾಗದಲ್ಲಿ ರಾಗಿಯನ್ನು ಹೆಚ್ಚಿನ ಪ್ರಮಾಣದಲ್ಲಿ

ಉಪಯೋಗಿಸುತ್ತಾರೆಂಬುದನ್ನು ನಾವು ತಿಳಿದುಕೊಂಡು ಕ್ವಿಂಟಾಲ್‌ಗೆ ೧೩೦ ರೂಪಾಯಿಯಂತೆ ರಾಗಿಯನ್ನೂ ಮತ್ತು ಕ್ವಿಂಟಾಲ್‌ಗೆ ೧೬೦ ರೂಪಾಯಿಯಂತೆ ಜೋಳವನ್ನೂ ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಂಡು ಅದನ್ನು ವಿತರಣೆ ಮಾಡುತ್ತಿದ್ದೇವೆ. ಕಳೆದಸಾರಿ ೩೫೦೦ ಟನ್ ಜೋಳವನ್ನೂ, ೩೪೦೦ ಟನ್ ರಾಗಿಯನ್ನೂ ನಾವು ವಿತರಣೆ ಮಾಡಿದ್ದೇವೆ. ಪ್ರಸಕ್ತ ಸಾಲಿನಲ್ಲಿ ೨೦ ಸಾವಿರ ಟನ್ ಜೋಳವನ್ನೂ ಮತ್ತು ೨೦ ಸಾವಿರ ಟನ್ ರಾಗಿಯನ್ನೂ ನಮ್ಮಲ್ಲಿ ಬಫರ್ ಸ್ಟಾಕ್ ಮಾಡಬೇಕೆಂದು ಯೋಚನೆ ಇಟ್ಟುಕೊಂಡಿದ್ದೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್. —ನಮ್ಮ ಕರ್ನಾಟಕ ರಾಜ್ಯಕ್ಕೆ ಹೊರಗಿನ ರಾಜ್ಯಗಳಿಂದ ಬರತಕ್ಕ ಆಹಾರಧಾನ್ಯ ಎಷ್ಟು ಮಂತ್ರಿ ನಮ್ಮ ರಾಜ್ಯದಿಂದ ಹೊರಗಿನ ರಾಜ್ಯಗಳಿಗೆ ಹೋಗತಕ್ಕ ಆಹಾರಧಾನ್ಯ ಎಷ್ಟು ಎಂಬುದನ್ನು ಹೇಳುತ್ತೀರಾ?

ಶ್ರೀ ಜಿ. ಬಸವಣ್ಣೆಪ್ಪ.—ಆಹಾರಧಾನ್ಯಗಳ ಸಾಗಣೆ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗಬೇಕಾದರೆ ಒಂದು ನಿರ್ಬಂಧ ಇದೆ. ಉದಾಹರಣೆಗೆ ಹೇಳುವುದಾದರೆ ಭತ್ತವನ್ನು ಯಾವುದೇ ರಾಜ್ಯದಿಂದ ಆಗಲಿ ಹೊರಗಡೆ ಸಾಗಿಸುವಂತಿಲ್ಲ. ಭತ್ತವನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವುದಕ್ಕೆ ಬ್ಯಾನ್ ಆರ್ಡರ್ ಇದೆ. ಇದು ಕೇಂದ್ರಸರ್ಕಾರದ ಪಾಲಿಸಿ. ಆದರೆ ಅಕ್ಕಿಯನ್ನು ಸಾಗಣೆ ಮಾಡುವಾಗ ೫೦ ಪರ್ಸೆಂಟ್ ಅಕ್ಕಿಯನ್ನು ಲೆವಿ ಕೊಟ್ಟು ಉಳಿದ ೫೦ ಪರ್ಸೆಂಟ್ ಅಕ್ಕಿಯನ್ನು ಸಾಗಣೆ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ಪರ್ಮಿಟನ್ನು ಕೊಡುತ್ತಾರೆ ಇಲ್ಲಿ ಒಂದೊಂದು ರಾಜ್ಯವನ್ನೂ ಒಂದೊಂದು ಜೋನ್ ಎಂದು ಕೇಂದ್ರದವರು ಪರಿಗಣಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಆಂಧ್ರಪ್ರದೇಶದಲ್ಲಿ ಆಹಾರಧಾನ್ಯಗಳ ಉತ್ಪಾದನೆ ಜಾಸ್ತಿ ಇದೆ. ಆದರೆ ಅಲ್ಲಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಅದನ್ನು ಸಾಗಣೆ ಮಾಡುವುದಕ್ಕೆ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಆಹಾರಧಾನ್ಯಗಳ ಕೊರತೆ ಇರುವುದರಿಂದ. ನಮಗೆ ಅದನ್ನು ಸರಬರಾಜು ಮಾಡಿ ಎಂದು ಬರವಣಿಗೆಯಲ್ಲಿ ಕೊಡಲು ಬರುವುದಿಲ್ಲ. ಆದ್ದರಿಂದ ಹೊರ ರಾಜ್ಯಗಳಿಂದ ಬರತಕ್ಕ ಆಹಾರಧಾನ್ಯಗಳಿಗೆ ತಾವು ರಿಸ್ಟ್ರಿಕ್ಷನ್ ಹಾಕಬಾರದೆಂದು ನಾವು ಬಾಯಿಮಾತಿನಲ್ಲಿ ಹೇಳಿದ್ದೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಸ್ವಾಮಿ, ತಾವು ಹಂಚುತ್ತಿರುವ ಹಸಿರು ಕಾರ್ಡ್ ಮತ್ತು ಕೆಂಪು ಕಾರ್ಡ್‌ಗಳಿಗೆ ವ್ಯತ್ಯಾಸ ಇದೆ. ಈ ಕಾರ್ಡುಗಳ ವಿತರಣಾ ಕಾರ್ಯವನ್ನು ಪೂರ್ಣ ಮಾಡಲು ಮುಂದಿನ ಏಪ್ರಿಲ್ ತಿಂಗಳವರೆಗೂ ಕಾಲ ವಿಸ್ತರಣೆ ಮಾಡುತ್ತಿದ್ದೀರಿ. ಅದುವರೆಗೂ ನಿಮಗೆ ಈ ಆಹಾರಧಾನ್ಯಗಳ ವಿತರಣಾ ಕಾರ್ಯ ಸಾಧ್ಯವಾಗುವುದಿಲ್ಲ. ಅಂದಮೇಲೆ ನೀವು ಈ ಕಾರ್ಡುಗಳ ಹಂಚಿಕೆ ಕಾರ್ಯವನ್ನು ಯಾವಾಗ ಮುಗಿಸುತ್ತೀರಿ?

ಶ್ರೀ ಜಿ. ಬಸವಣ್ಣೆಪ್ಪ.—ಮೊದಲು ಫೆಬ್ರುವರಿ ೮ರವರೆಗೆ ಕಾಲಪನ್ನು ನಿಗದಿ ಮಾಡಲಾಗಿತ್ತು. ಆದರೆ ಅದು ಸಕಾಲದಲ್ಲಿ ಮಾಡಲು ಸಾಧ್ಯವಾಗದ ಪ್ರಯುಕ್ತ ಈಗ ಈ ಕಾಲಾವಧಿಯನ್ನು ಈ ತಿಂಗಳ ಅಂದರೆ ಮಾರ್ಚ್ ತಿಂಗಳ ಕೊನೆಯವರೆಗೂ ವಿಸ್ತರಣೆ ಮಾಡಿದ್ದೇವೆ. ಆದಷ್ಟು ಬೇಗ ಈ ಕಾರ್ಡುಗಳ ಹಂಚಿಕೆ ಕಾರ್ಯವನ್ನು ಮುಗಿಸಲು ಕ್ರಮ ತೆಗೆದುಕೊಂಡಿದ್ದೇವೆ. ಹಂಚಿಕೆಯಲ್ಲಿ ಏನಾದರೂ ವ್ಯತ್ಯಾಸ ಆದರೆ ಅದನ್ನು ಸರಿಪಡಿಸುತ್ತೇವೆ.

ತಡೆ ಹಿಡಿಯಲಾಗಿದ್ದ ಪ್ರಶ್ನೋತ್ತರಗಳು (ಹಿಟನೇ ಪಟ್ಟಿಯಿಂದ)

ರಾಜ್ಯದಲ್ಲಿ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಬಗ್ಗೆ,

೧೨೨೯ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು),—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಸಂಖ್ಯೆ ಎಷ್ಟು?

ಆ) ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸಬೇಕೆನ್ನುವ ಯೋಜನೆಯಲ್ಲವೆ?

ಇ) ಈ ಯೋಜನೆಯ ಪ್ರಕಾರ ಅವರಿಗೆ ಕೊಡುತ್ತಿರುವ ಗೌರವಧನ ಎಷ್ಟು?

ಈ) ಗೌರವಧನ ಹೆಚ್ಚಿಸಬೇಕೆಂದು ಅವರು ಹೋರಾಟ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ ಈ ಗೌರವಧನ ಹೆಚ್ಚಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮಂತ್ರಿಗಳು).—

ಅ) ೧೪,೬೭೩

ಆ) ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ

ಇ) ತಿಂಗಳಿಗೆ ೫೦ ರೂಪಾಯಿಂಗಳು

ಈ) ಬಂದಿದೆ

ಉ) ಈ ಮಾಹಿತಿಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ.

ಶ್ರೀ ಆರ್. ವೆಂಕಟರಾಮಯ್ಯ.— ಸ್ವಾಮಿ, ಸಾಧಾರಣವಾಗಿ ೨ ಹಳ್ಳಿಗಳಿಗೆ ಒಬ್ಬರಂತೆ ಈ ಸಮುದಾಯ ಆರೋಗ್ಯ ಮಾರ್ಗದರ್ಶಿಗಳನ್ನು ಸರ್ಕಾರದವರು ನೇಮಕ ಮಾಡಿಕೊಂಡಿದ್ದೀರಿ. ಅವರು ಅದರಂತೆಯೇ ಕೆಲಸ ಮಾಡುತ್ತಿದ್ದಾರೆ. ಅವರು ಒಂದು ಕಡೆ ಕೂತಿರುವುದಿಲ್ಲ. ಹಳ್ಳಿಯಿಂದ ಹಳ್ಳಿಗೆ ನಡೆದುಕೊಂಡು ಹೋಗಬೇಕಾಗಿರುತ್ತದೆ. ಇವರು ಬೇರ್–ಫುಟ್ ಡಾಕ್ಟರ್ಸ್ ಇವರಿಗೆ ನೀವು ತಿಂಗಳಿಗೆ ೫೦ ರೂಪಾಯಿಗಳನ್ನು ಗೌರವ ಧನ ಎಂದು ಕೊಡುತ್ತಿದ್ದೀರಿ. ಇದು ಅವರಿಗೆ ಇವತ್ತಿನ ಕಾಲದಲ್ಲಿ ಏನೇನೂ ಸಾಲದವುದಿಲ್ಲ. ಆದ್ದರಿಂದ ೫೦ ರೂಪಾಯಿಯ ಜೊತೆಗೆ ಇನ್ನೂ ೫೦ ರೂಪಾಯಿಗಳನ್ನು ಅಂದರೆ ೧೦೦ ರೂಪಾಯಿಂಗಳನ್ನು ಪ್ರತಿ ತಿಂಗಳೂ ಕೊಟ್ಟರೆ ಅದರಿಂದ ಅವರಿಗೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದಂತಾಗುತ್ತದೆ. ಅವರು ತಮಗೆ ಈ ಗೌರವ ಧನವನ್ನು ಹೆಚ್ಚು ಮಾಡಬೇಕೆಂದು ಅನೇಕ ಸಾರಿ ಮನವಿಗಳನ್ನು ಕೊಟ್ಟಿದ್ದಾರೆ. ನೀವು ಏನು ೫೦ ರೂಪಾಯಿ ಗೌರವ ಧನವನ್ನು ಕೊಡುತ್ತಿದ್ದೀರಿ. ಈ ಗೌರವ ಧನವನ್ನು ಕೊಡುವುದಕ್ಕೂ ಒಂದು ಗೌರವ ಇರಬೇಕು. ಆದರೆ ೫೦ ರೂಪಾಯಿ ಕೊಡುತ್ತಿರುವುದು ನಿಜಕ್ಕೂ ಒಂದು ಅಪಮಾನದ ಸಂಗತಿ. ಆದ್ದರಿಂದ ಅವರಿಗೆ ತಿಂಗಳಿಗೆ ೧೦೦ ರೂಪಾಯಿ ಗೌರವ ಧನವನ್ನು ಇನ್ನು ಮುಂದೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕೆಂದು ಕೋರುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಅವರನ್ನು ಡಾಕ್ಟರ್‌ಗಳೆಂದು ನಾವು ನೇಮಕ ಮಾಡಿಕೊಂಡಿಲ್ಲ. ಆರೋಗ್ಯ ಸಹಾಯಕರು ಎಂದು ನೇಮಕ ಮಾಡಿಕೊಂಡಿದ್ದೇವೆ ನಾವು ಅವರಿಗೆ ಕೆಲವು ಔಷಧಿಗಳನ್ನು ಕೊಟ್ಟಿರುತ್ತೇವೆ. ಅವರು ಆ ಔಷಧಿಗಳನ್ನು ತಮ್ಮ ಹತ್ತಿರ ಇಟ್ಟುಕೊಂಡು ಆ ಊರಿನಲ್ಲೇ ಇದ್ದುಕೊಂಡು ಯಾರಿಗಾದರೂ ಸಣ್ಣಪುಟ್ಟ ಕಾಯಿಲೆಗಳು ಅಂದರೆ ಕೆಮ್ಮು, ನೆಗಡಿ, ತಲೆನೋವು, ಇಂಥಾದ್ದು ಬಂದಾಗ ಈ ಔಷಧಿಗಳನ್ನು ಕೊಡಬೇಕೆಂದು ಮಾಡಿದ್ದೇವೆ.ಈ ಯೋಜನೆ ನಮ್ಮ ರಾಜ್ಯ ಸರ್ಕಾರದ್ದಲ್ಲ. ಇದು ಕೇಂದ್ರ ಸರ್ಕಾರದ ಯೋಜನೆ. ಆದ್ದರಿಂದ ನಾವು ಇವರಿಗೆ ಈಗ ಏನು ೫೦ ರೂಪಾಯಿಗಳನ್ನು ಗೌರವ ಧನವಾಗಿ ಕೊಡುತ್ತಿದ್ದೇವೆ ಅದನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ನಮ್ಮ ಉದ್ದೇಶ ಏನೆಂದರೆ, ಇವರು ತಮ್ಮ ಊರಿನಲ್ಲೇ ಇದ್ದುಕೊಂಡು ಆಕಸ್ಮಿಕವಾಗಿ ಸಣ್ಣಪುಟ್ಟ ಕಾಯಿಲೆಗಳು ಜನರಿಗೆ ಬಂದಾಗ ಗುಣಪಡಿಸಲಿ ಎಂಬುದು. ಅವರು ಈ ಕೆಲಸವನ್ನು ಮಾಡುತ್ತಿರುವುದರಿಂದ ಅವರಿಗೆ ಗೌರವ ಧನವಾಗಿ ೫೦ ರೂಪಾಯಿಂಗಳನ್ನು ಕೊಡುತ್ತಿದ್ದೇವೆ. ಆದರೆ ಇದನ್ನು ಜಾಸ್ತಿ ಮಾಡಬೇಕೆಂದರೆ ಸರ್ಕಾರಕ್ಕೆ ಕಷ್ಟವಾಗುತ್ತದೆ. ನಾವು ಅವರಿಗೆ ಏನು ಕೆಲಸವನ್ನು ಕೊಟ್ಟಿದ್ದೇವೆ ಇದನ್ನು ಅವರು ಸರ್ಕಾರದ ಕೆಲಸವೆಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಇದರಲ್ಲಿ ಅವರಿಗೆ ಯಾವುದೇ ರೀತಿಯಲ್ಲೂ ಸರ್ಕಾರದ ಸೌಲಭ್ಯಗಳು ಸಿಕ್ಕುವುದಿಲ್ಲ. ಈಗ ಕೇಂದ್ರ ಸರ್ಕಾರದವರು ಏನು ಯೋಚನೆ ಮಾಡುತ್ತಿದ್ದಾರೆಂದರೆ, ಈ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಕೆಲಸವನ್ನು ಸ್ಥಳೀಯವಾಗಿ ಇರತಕ್ಕ ಸೂಲಗಿತ್ತಿಯರಿಗೆ ವಹಿಸಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಒಂದು ವೇಳೆ ಅವರಿಗೆ ವಹಿಸುವುದಕ್ಕಾಗದಿದ್ದರೆ ವಿದ್ಯಾವಂತ ಮಹಿಳೆಯರಿಗೆ ಇದನ್ನು ವಹಿಸಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ ಯೋಜನೆಯಾದ್ದರಿಂದ ನಾವು ಇವರಿಗೆ ಗೌರವ ಧನವನ್ನು ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ. ಇವರಿಂದ ಮನವಿ ಬಂದಮೇಲೆ ನಾವು ಕೇಂದ್ರ

ಸರ್ಕಾರಕ್ಕೆ ಪತ್ರವನ್ನು ಬರೆದು ನೀವು ಹಣವನ್ನು ಕೊಡುವುದಾದರೆ ಇವರಿಗೆ ಕೊಡುತ್ತಿರುವ ಗೌರವ ಧನವನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆಂದು ಹೇಳಿದ್ದೇವೆ. ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟರೆ ನಾವು ಹೆಚ್ಚು ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಗೌರವ ಧನವೆಂದು ಕೊಡುತ್ತಿರುವುದಕ್ಕೂ ಒಂದು ಗೌರವ ಇರಬೇಕು. ನೀವು ಅವರಿಗೆ ೫೦ ರೂಪಾಯಿಗಳನ್ನು ಏನು ಕೊಡುತ್ತಿದ್ದೀರಿ ಅಂದರೆ ಒಂದು ದಿವಸಕ್ಕೆ ಒಂದೂ ಮುಕ್ಕಾಲು ರೂಪಾಯಿ ಆಪರಿಗೆ ಕೊಡುತ್ತಿದ್ದೀರಿ ಅದರಿಂದ ಅವರಿಗೆ ಏನೂ ಪ್ರಯೋಜನವಾಗುವುದಿಲ್ಲ. ಅವರು ಬರಿಗಾಲಿನಲ್ಲಿ ಹಳ್ಳಿಹಳ್ಳಿಯನ್ನೂ ಸುತ್ತಾಡಿಕೊಂಡು ಓಡಾಡಬೇಕಾಗಿರುವುದರಿಂದ ಈ ಗೌರವ ಧನವನ್ನು ಇನ್ನೂ ಹೆಚ್ಚಿಗೆ ಕೊಟ್ಟರೆ ನಿಮಗೂ ಒಂದು ಗೌರವ ಬರುತ್ತದೆ. ಅನೇಕ ಕಡೆಗಳಲ್ಲಿ ಒಬ್ಬೊಬ್ಬ ಮಾರ್ಗದರ್ಶಿ ೪–೫ ಹಳ್ಳಿಗಳನ್ನು ಸುತ್ತಾಡಬೇಕಾಗುತ್ತದೆ. ಇನ್ನು ಕೆಲವು ಕಡೆಗಳಲ್ಲಿ ೧೦ ಹಳ್ಳಿಗಳವರೆಗೂ ಸುತ್ತಾಡಬೇಕಾದ ಪರಿಸ್ಥಿತಿ ಇದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೧೦ ಹಳ್ಳಿಗಳಿಗೆ ಒಬ್ಬರಂತೆ ನಾವು ನೇಮಕ ಮಾಡಿಲ್ಲ. ೨–೩ ಹಳ್ಳಿಗಳಿಗೆ ಒಬ್ಬೊಬ್ಬರು ಇರುತ್ತಾರೆ. ೧೦೦೦ ಜನರಿಗೆ ಒಬ್ಬರಂತೆ ಮಾಡಿದ್ದೇವೆ. ನಾವು ಅವರನ್ನು ನೇಮಕ ಮಾಡಿಕೊಳ್ಳುವಾಗ ನಿಮಗೆ ಗೌರವ ಧನ ಎಂದು ೫೦ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿಯೇ ನೇಮಕ ಮಾಡಿಕೊಂಡಿರುತ್ತೇವೆ. ಆದರೆ ಈಗ ಇವರಿಗೆ ಇದನ್ನು ಹೆಚ್ಚು ಮಾಡಬೇಕೆಂದರೆ ಸರ್ಕಾರಕ್ಕೆ ಹೆಚ್ಚು ಖರ್ಚು ಬರುತ್ತದೆ. ಸಾಮಾನ್ಯವಾಗಿ ೮–೧೦ ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ಒಂದೊಂದು ಆಸ್ಪತ್ರೆಯನ್ನೇ ಕೊಟ್ಟಿದ್ದೇವೆ. ಇವರಿಂದ ನಾವು ನಿರೀಕ್ಷೆ ಏನು ಮಾಡಿದ್ದೇವೆಂದರೆ ಇವರು ಆ ಊರಿನಲ್ಲೇ ಇದ್ದುಕೊಂಡು ಅಲ್ಲಿನ ಜನರಿಗೆ ಸಣ್ಣಪುಟ್ಟ ಕಾಯಿಲೆಗಳು ಬಂದಾಗ ಸಹಾಯ ಮಾಡಲಿ ಎಂಬುದಾಗಿ. ಈ ಕೆಲಸವನ್ನು ನಾವು ಮಾಡಿಸಿಕೊಳ್ಳುವುದರಿಂದ ಇವರಿಗೆ ಏನಾದರೂ ಸ್ವಲ್ಪ ಸಂಭಾವನೆಯನ್ನು ಕೊಡೋಣವೆಂದು ತೀರ್ಮಾನಿಸಿ ತಿಂಗಳಿಗೆ ೫೦ ರೂಪಾಯಿಂಗಳನ್ನು ಕೊಡುತ್ತಿದ್ದೇವೆ ಆದರೆ ಈ ಹಣ ಸಾಲದು, ಇವರಿಗೆ ನೀವು ಅನ್ಯಾಯ ಮಾಡುತ್ತಿರುವಿರೆಂದು ತಾವು ಹೇಳುವುದಾದರೆ ಇದಕ್ಕೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಅವರಿಗೆ ಸ್ವಲ್ಪ ಮದ್ದನ್ನು ಕೊಡುತ್ತೀರಿ. ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಯ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಅವರು ಈ ಬೇರೆ ಕೆಲಸವನ್ನೂ ಮಾಡುತ್ತಿದ್ದಾರೆ. ಆದ್ದರಿಂದ ನೀವು ಇವರಿಗೆ ಏನಾದರೂ ಇನ್‌ಸೆಂಟಿವ್ ಕೊಟ್ಟು ಸಹಾಯ ಮಾಡಬೇಕು. ಕೇಂದ್ರ ಸರ್ಕಾರದವರು ಕೊಡತಕ್ಕದ್ದು ಸಾಲುವುದಿಲ್ಲ. ಅವರು ಕೊಡುತ್ತಿರುವ ಹಣದ ಜೊತೆಗೆ ರಾಜ್ಯ ಸರ್ಕಾರದವರೂ ಕೂಡ ಸ್ವಲ್ಪ ಹಣವನ್ನು ಕೊಡಬೇಕು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇವರ ಕೆಲಸದ ಜೊತೆಗೆ ಬೇರೆ ರೀತಿಯ ಸಂಪಾದನೆ ಮಾರ್ಗವೂ ಇದೆ. ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಜನರ ಮನವೊಲಿಸಿದರೆ ಒಂದೊಂದು ಕೇಸಿಗೂ ಇಂತಿಷ್ಟು ಹಣ ಎಂದು ಸರ್ಕಾರದಿಂದ ಕೊಡುತ್ತಿದ್ದೇವೆ. ಈ ಬಾಬಿನಿಂದಲೂ ಇವರಿಗೆ ಸಾಕಷ್ಟು ಆದಾಯ ಇದೆ ಎನ್ನುವ ವಿಷಯನ್ನು ಹೇಳ ಬಯಸುತ್ತೇನೆ.

ಕಾಪು ಪೋಲಿಸ್ ಔಟ್‌ಪೋಸ್ಟ್ ಸಿಬ್ಬಂದಿ ವರ್ಗಕ್ಕೆ ವಸತಿ ಸೌಕರ್ಯ ಒದಗಿಸುವ ಬಗ್ಗೆ

೩೫೫ ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕಾಪು ಪೋಲೀಸ್ ಔಟ್‌ಪೋಸ್ಟ್ ಸಿಬ್ಬಂದಿ ವರ್ಗಕ್ಕೆ ವಸತಿ ಸೌಕರ್ಯ ಒದಗಿಸುವ ಯೋಜನೆ ಯಾವ ಹಂತದಲ್ಲಿದೆ.

(ಆ) ಈ ಯೋಜನೆ ಕಾರ್ಯಗತವಾಗದಿರಲು ಕಾರಣಗಳೇನು ?

(ಇ) ಈ ಯೋಜನೆ ಎಂದು ಕಾರ್ಯಗತವಾಗಬಹುದು ?